(ಬಹುವಚನ ಭಾರತ, ಪು.63, ಅಭಿನವ ಪ್ರಕಾಶನ, ಬೆಂಗಳೂರು)

ನಾಲ್ಕು ವರ್ಷಗಳ ನ್ಯಾಯಾಲಯ ವಿಚಾರಣೆಯ ನಂತರ, 'ಸಾಕ್ಷ್ಯಾಧಾರಗಳ ಕೊರತೆ'ಯ ಕಾರಣ ಆ ಪ್ರಕರಣದ ಎಲ್ಲ ಆರೋಪಿಗಳೂ ಮುಕ್ತರಾದರು. ತೀರ್ಪಿನಲ್ಲಿ 'ನಾಗರಿಕ ಸಮಾಜದಲ್ಲಿ ಇಂಥ ಕೃತ್ಯವು ಸಾರ್ವಜನಿಕರ ಸಮ್ಮುಖ ನಡೆಯುತ್ತದೆ ಎಂಬುದನ್ನು ನಂಬಲಸಾಧ್ಯ...' ಎಂದು ಹೇಳಲಾಗಿದೆ! ಆದರೇನು? ತೀರ್ಪು ಬಂದದ್ದೇ, ಆರೋಪಮುಕ್ತರು ಮೆರವಣಿಗೆ ತೆಗೆದು, ಸಾರ್ವಜನಿಕ ಸಭೆ ನಡೆಸಿ, ಯಾವ ಕೃತ್ಯದಿಂದ ಅವರನ್ನು ಮುಕ್ತಗೊಳಿಸಲಾಗಿತ್ತೋ ಆ ಕೃತ್ಯವನ್ನು ಮತ್ತೆ ಮತ್ತೆ ಎಸಗುವ ವಿಜಯೋನ್ಮತ್ತ ಎಚ್ಚರಿಕೆಯನ್ನು ಮುಸಲ್ಮಾನರಿಗೆ ನೀಡಿದರು! ಆ ರೀತಿ ಮಾಡಿದವರು ಕಾಣದ ಲೋಕದ ಅಪರಿಚಿತ ಜೀವಿಗಳಾಗಿರಲಿಲ್ಲ; ಉಡುಪಿಯ ಜನರು ನೋಡಿ ಬಲ್ಲವರಾಗಿದ್ದರು, ಅಕ್ಕಪಕ್ಕದ ಮನೆಯ ಸಾಮಾನ್ಯ ಜನರಾಗಿದ್ದರು; ನಿತ್ಯವು ಒಡನಾಡುವಷ್ಟು ಸನಿಹದವರಾಗಿದ್ದರು. ಉಡುಪಿಯ ಸಾಮಾನ್ಯ ನಾಗರಿಕರಿಗೆ ಇದ್ಯಾವುದೂ ಭಯ–ಆತಂಕ ಉಂಟು ಮಾಡಿದಂತೆ ಕಾಣುವುದಿಲ್ಲ. ನಮ್ಮ ಊರ, ನಮ್ಮಂಥದೇ ಜನರಿಗೆ ಇದು ನಮ್ಮ ಅಂಗಳದಲ್ಲೇ ಬೆಳೆಯುತ್ತಿರುವ ಕೇಡು ಅಂತ ಯಾಕೆ ಅನಿಸುತ್ತಿಲ್ಲ? ಸಾಮಾನ್ಯರು ಹೀಗೆ ಕೇಡಿನ ಸಂವೇದನೆ ಕಳೆದುಕೊಂಡವರಾದರೆ, ಆ ಗುಂಪು ಮಾತ್ರವಲ್ಲ, ಉಡುಪಿಯ ಯಾವ ಸಾಮಾನ್ಯರೂ ಗುಂಪು ಕೂಡಿಕೊಂಡು ಇಂಥ ಕೃತ್ಯವನ್ನು ಯಾವ ನ್ಯಾಯನೀತಿಗಳ ತಳಮಳವಿರದೆ ಎಸಗುವುದೂ ಸಹಜವಾಗುತ್ತದೆ. ಹೀಗಾಗುವುದಕ್ಕೆ ಒಂದು ಕಾರಣ: ಹಾಜಬ್ಬ–ಹಸನಬ್ಬ ನಮ್ಮ ಹಾಗೆ ಸಂಸಾರವಂದಿಗರು, ನಮ್ಮ ಹಾಗೇ ಬಂಧುಬಳಗ ಇರುವ ನಮ್ಮ ಊರಿನವರ ಹಾಗೆ ಕಾಣದೇ 'ಮುಸಲ್ಮಾನ ಸಮುದಾಯ'ದ ಪ್ರತಿನಿಧಿಗಳಾಗಿ ಕಾಣತೊಡಗಿರುವುದು; ಹಿಂದುತ್ವವಾದಿ ರಾಜಕೀಯವು 'ಮುಸಲ್ಮಾನರ' ಮೇಲೆ ಆರೋಪಿಸುವ ಎಲ್ಲಾ ಕೃತ್ಯಗಳಿಗೂ ಇವರು ಹೊಣೆಗಾರರಾಗಿ ಕಂಡು, ಅವರ ಮೇಲೆ ನಡೆಯುವ ಹಿಂಸೆಯು 'ಮುಸಲ್ಮಾನರ' ಆರೋಪಿತ ಕೃತ್ಯಗಳಿಗೆ ತಕ್ಕ ಶಿಕ್ಷೆ ಎಂಬುದು ಸಾಮಾನ್ಯವಾಗಿ ಹೋಗಿರುವುದು. ಈ ವಿದ್ಯಮಾನದಲ್ಲಿ ನಾವು ದೇಹಗಳ ಮೇಲೆ ನಡೆದ ಹಿಂಸೆಯನ್ನು ಮಾತ್ರವಲ್ಲದೆ, ಹಿಂಸೆಗೆ ಈಡಾದವರು ತಮ್ಮ ಹಾಗಿರುವ ಸಾಮಾನ್ಯ ಮನುಷ್ಯರು ಎಂದು ಗುರುತಿಸಬಲ್ಲ ಊರ ಜನರ ಬುದ್ಧಿ ವಿವೇಚನೆಯನ್ನೇ ಕೊಂದುಹಾಕಿರುವಂತಹ ಸಾಮೂಹಿಕ ಹಿಂಸೆಯೂ ಆಗಿದೆ – ಇದನ್ನೇ 'ಹಿಂಸೆಯ ಸಾಮಾನ್ಯತೆ' (ಬ್ಯಾನಾಲಿಟಿ ಆಫ್ ವಾಯ್ಲೆನ್ಸ್) ಅನ್ನುವುದು.

> ಮುಸಲ್ಮಾನರಿಗೂ ತಾಯಿ ತಂದೆ, ಅಕ್ಕ ತಂಗಿ, ಬಂಧುಬಳಗ ಎಲ್ಲ ಇರುತ್ತಾರೆ. ಅವರು ಇಲ್ಲಿಯೇ ಹುಟ್ಟಿ ಬೆಳೆದವರು, ನಮ್ಮ ಹಾಗೆಯೇ.

'ಹಿಂಸೆಯ ಸಾಮಾನ್ಯತೆ'ಯ ಕಾರಣವಾಗಿ ನರಮೇಧಗಳು ಪ್ರಪಂಚದಾದ್ಯಂತ ನಡೆದಿವೆ–ನಡೆಯುತ್ತಿವೆ. ಅದರ ಒಂದು ಝಲಕು ನಮ್ಮೂರುಗಳಲ್ಲೂ ಕಾಣುತ್ತಿರುವುದು ನಮ್ಮ ಅರಿವಿಗೆ ಬರದೇ, ಹಿಂಸೆಯನ್ನು ಎದುರಿಸುವುದು ನಿಗ್ರಹಿಸುವುದಾದರೂ ಹೇಗೆ? ವಿದ್ಯಮಾನದ ಸಾಮಾನ್ಯ ವಿವರಗಳನ್ನು ಕಾಣದೇ ಹೋದರೆ, ಇದು ಕೂಡ 'ಮುಸಲ್ಮಾನ'ರ ಮೇಲೆ 'ಹಿಂದುತ್ವ ಸಂಘಟನೆ' ನಡೆಸಿದ ಹಿಂಸೆ ಎಂದೇ ಹಿಂಸೆ ವಿರೋಧಿಸುವವರೂ ಮಾತಾಡತೊಡಗುತ್ತೇವೆ! ಆಗ ನಾವು ಏನು ಮಾಡುತ್ತೇವೆ? ಹಿಂಸೆಗೆ ತುತ್ತಾದವರನ್ನೂ, ಹಿಂಸೆ ನಡೆಸಿದವರನ್ನೂ ಸಾಮಾನ್ಯ ಜನರಂತೆ ಭಾವಿಸದೇ ಎರಡು ವಿರುದ್ಧ 'ಗುಂಪು'ಗಳ ಹಾಗೆ ಕಾಣುತ್ತೇವೆ; 'ಹಿಂಸೆಯ ಸಾಮಾನ್ಯತೆ'ಯ ಭಯಾನಕತೆಗೆ ಸಂವೇದನಾಹೀನರಾಗುತ್ತೇವೆ. ಇದಕ್ಕೇ ರಾಜಶೇಖರ 'ಉಡುಪಿಯಲ್ಲಂತೂ ಇದನ್ನು ಮತ್ತೆಮತ್ತೆ ಹೇಳಬೇಕು' ಎಂದು ಮುದ್ದಾಮ್ಮಾಗಿ ಹೇಳುತ್ತಾರೆ. ಘಟನೆಯ ಸಾಮಾನ್ಯ ವಿವರಗಳನ್ನು ಅರಿಯುವುದು 'ಹಿಂಸೆಯ ಸಾಮಾನ್ಯತೆ'ಯನ್ನು ಅರಿಯುವ, ಅರಸುವ ಪ್ರತಿರೋಧದ ಮಾರ್ಗ. ●